ಕೊಳವೆ ಬಾವಿಗಳನ್ನು ತೋಡಿದ್ದು ಆದರಲ್ಲಿ ಗಂಟೆಗೆ ೧೮೦೦ ಗ್ಯಾಲನ್ ನೀರು ಕೊಡುವ ಕೊಳವೆ ಬಾವಿಗೆ ವಿದ್ಯುತ್ ಪಂಪ್ ಅಳವಡಿಸಲಾಗಿದ್ದು ವಿತರಣೆ ವ್ಯವಸ್ಥೆಗೆ ನೇರವಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ೧೯೮೪ನೇ ಸಾಲಿನಲ್ಲಿ ಕೇವಣಿ ಕೊಡುಗೆಯಲ್ಲಿ ಒಂದು ಕೊಳವೆ ಬಾವಿ ತೋಡಿದ್ದು ಅದಕ್ಕೆ ಕೈಪಂಪ್ ಅಳವಡಿಸಲಾಗಿದೆ. ಒಟ್ಟು ೮ ಕೊಳವೆ ಬಾವಿಗಳಿಗೆ ಕೈಪಂಪ್‌ನ್ನು ಅಳವಡಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನು ಒಂದು ವಾರದಲ್ಲಿ ಬೋರ್‌ವೆಲ್‌ಗೆ ಮತ್ತೊಂದು ಪಂಪನ್ನು ಅಳವಡಿಸಿ ನೀರು ಸರಬರಾಜು ಮಾಡುತ್ತೇವೆ. ಮೇಲ್ಕಂಡ ಎಲ್ಲಾ ಮೂಲಗಳಿಂದ ಪಟ್ಟಣದಲ್ಲಿ ದಿನ ಪ್ರತಿ ತಲಾ ೩೬ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇನ್ನು ಎರಡನೆಯದಾಗಿ ಸುಲಭ ಶೌಚಾಲಯದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಎರಡು ಸಾರಿ ಟೆಂಡರ್ ಕರೆದಿದ್ದೆವು. ಆದನ್ನು ಯಾರೂ ತೆಗೆದುಕೊಳ್ಳಲಿಕ್ಕೆ ಬರಲಿಲ್ಲ. ಈಗ ಮೂರನೇ ಸಲ ಟೆಂಡರ್ ಕರೆದಿದ್ದೇವೆ. ಟೆಂಡರ್ ಬಂದಮೇಲೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ.— ಟೆಂಡರ್ ಕರೆದಿದ್ದೀರಿ ಸರಿ, ಕಂಟ್ರಾಕ್ಟರ್ ಆವಾಗಲೂ ಬರಲಿಲ್ಲ ಎಂದರೆ, ಈ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ನಿಮ್ಮ ಲ್ಯಾಂಡ್ ಆರ್ಮಿನಿಂದಲಾದರೂ ಆಗಲಿ ಅಥವಾ ನಿಮ್ಮ ಡಿಪಾರ್ಟ್‌ಮೆಂಟ್ ಮುಖಾಂತರವಾಗಲಿ ವ್ಯವಸ್ಥೆ ಮಾಡಿಕೊಡುವ ಹಾಗೆ ಮಾಡಿದರೆ ಅಲ್ಲಿನ ಜನತೆಗೆ ಅನುಕೂಲವಾಗುತ್ತದೆ. ಹಾಗಾದರೂ ಮಾಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಮಾನ್ಯ ಮಂತ್ರಿಗಳ ಛೇಂಬರ್‌ಗೆ ಹೋಗಿ ಮಾತನಾಡಿಕೊಳ್ಳಿ.

ಶಿವಮೊಗ್ಗ ಜಿಲ್ಲೆಯಲ್ಲಿ ಬಡವರಿಗೆ ಅರಣ್ಯ ಅಧಿಕಾರಿಗಳಿಂದ ಆಗುತ್ತಿರುವ ಕಿರುಕುಳದ ಬಗ್ಗೆ

೧೭. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಕಾಡು ಪ್ರಾಣಿಗಳು ಜಾಸ್ತಿ ಇದೆ. ಇದನ್ನು ರಕ್ಷಿಸಬೇಕು. ಅಲ್ಲದೆ ಅಲ್ಲಿಯ ಅರಣ್ಯ ಅಧಿಕಾರಿಗಳೂ ಕೂಡ ಅದೇ ರೀತಿಯಾಗಿ ವರ್ತನೆ ಮಾಡುತ್ತಿದ್ದಾರೆ ಎಂದು ನಾನು ಹೇಳುವುದಕ್ಕೆ ವಿಷಪಡುತ್ತೇನೆ. ಅವರು ದೊಡ್ಡ ದೊಡ್ಡ ಕಳ್ಳಸಾಗಾಣಿಕೆದಾರರನ್ನು ಬಿಟ್ಟು ಬಡ ಜನರು ರೈತರು ಆ ಕಾಡುಗಳಲ್ಲಿ ಉರುವಲು ಕಟ್ಟಿಗೆಯನ್ನು ತೆಗೆದುಕೊಂಡು ಹೋಗುವವರ ಮೇಲೆ ತುಂಬಾ ದೌರ್ಜನ್ಯದಿಂದ ವರ್ತಿಸುತ್ತಿದ್ದಾರೆ. ತಮಗೆ ಹೇಳಬೇಕಾದರೆ ಶಿವಮೊಗ್ಗದ ಡಿ.ಎಫ್.ಓ. ಆದ ಶ್ರೀಮಾನ್ ಸಿಂಗ್ ಅವರು ಉರುವಲು ಕಟ್ಟಿಗೆಯನ್ನು ತೆಗೆದುಕೊಂಡು ಹೋಗುತ್ತಿದ್ದ ಆ ಬಡ ರೈತರನ್ನು ಹೊಡೆದು ಬಡಿದು, ಕಾಲು ಮುರಿದೂ ಇದ್ದಾರೆ. ಕೆಲವರ ಮನೆಗೆ ಬೆಂಕಿ ಇಟ್ಟು ಅವರ ಗುಡಿಸಲು ಸುಟ್ಟು ಹೋಗಿವೆ. ಈ ವಿಚಾರದಲ್ಲಿ ಪದೇ ಪದೇ ಅರಣ್ಯ ಮಂತ್ರಿಗಳಿಗೆ ಹೇಳುತ್ತಾ ಇದ್ದೇವೆ. ಆದರೂ ಸಹ ಈ ಬಗ್ಗೆ ಅವರು ಯಾವುದೇ ಗಮನ ಕೊಟ್ಟಿಲ್ಲ. ಇದಲ್ಲದೇ ಎರ್ನೆ ದಿವಸ ನಡೆದಿರತಕ್ಕಂಥಾ ಒಂದು ಘಟನೆ ಹೇಳುತ್ತೇನೆ. ಅದೇನೆಂದರೆ ಆ ರೈತರು ತಮ್ಮ ಮನೆಗೆ ಮುಳ್ಳು ತೆಗೆದುಕೊಂಡು ಹೋಗುತ್ತಿರುವಾಗ, ಅವರ ಮನೆ ಹತ್ತಿರಕ್ಕೇನೇ ಹೋಗಿ ಹೊಡೆದಿದ್ದಾರೆ, ಬಡಿದಿದ್ದಾರೆ. ಇಂಥಾವರ ವಿಚಾರದಲ್ಲಿ ತಾವು ಅವರಿಗೆ ಯಾವ ರಕ್ಷಣೆಯೂ ಕೊಡದೆ ಆ ಡಿ.ಎಫ್.ಓ. ಆದ ಶ್ರೀಮಾನ್ ಸಿಂಗ್ ಅವರನ್ನು ತಕ್ಷಣ ವರ್ಗಾವಣೆ ಮಾಡುತ್ತೀರಾ ಅಥವಾ ಸಸ್ಪೆಂಡ್ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು. ಈಗ ರೈತರು ಉರುವಲು ಕಟ್ಟಿಗೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವರು ಬಿಡಲ್ಲ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ತಾವು ಗಮನವಿಟ್ಟು ತಕ್ಷಣವೇ ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ ಮುಂದೆ ಇದು ಉಲ್ಬಣ ಪರಿಸ್ಥಿತಿಗೆ ಹೋಗುತ್ತದೆ. ಕೂಡಲೇ ಇದರ ಬಗ್ಗೆ ತಾವು ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೇ, ಈವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಮಾನ್ಯ ಸದಸ್ಯರು ಹೇಳಿದಂಥಾ ಎಲ್ಲಾ ವಿಷಯಗಳನ್ನೂ ಕೂಡ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಇದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.